ಕರ್ನಾಟಕ

ನಾಮಕರಣ ಮಹೋತ್ಸವ

ನಿವೇದನೆ



ಹಂಪೆಯಲ್ಲಿ
ಗುರುವಾರ
ನವೆಂಬರ್ 1, 1973.

ಗದುಗಿನಲ್ಲಿ
ಶನಿವಾರ
ನವೆಂಬರ್ 3, 1973.

ಕರ್ನಾಟಕ

ನಾಮಕರಣ ಮಹೋತ್ಸವ

ಕನ್ನಡಾಭಿಮಾನಿಗಳೇ,

ಭಾರತ ಸ್ವಾತಂತ್ರ್ಯದೊಡನೆ 1947ರಲ್ಲಿಯೆ 'ಕರ್ನಾಟಕ' ಅಭಿಧಾನದಿಂದ ಕನ್ನಡ ರಾಜ್ಯ ಅಸ್ತಿತ್ವದಲ್ಲಿ ಬರಬೇಕೆಂಬ ಬಯಕೆ ಅದೆಷ್ಟೇ ಇದ್ದರೂ ಮುಂದೆ 9 ವರ್ಷಗಳ ನಂತರ 1956 ರಲ್ಲಿ, ಭಾಷಾವಾರು ರಾಜ್ಯ ಪುನರ್ರಚನೆಯ ಫಲವಾಗಿ ನಮ್ಮ ಮೈಸೂರು ರಾಜ್ಯ ಮೂಡಿ ಬಂದಿತು. ಮುಂದೆ 17 ವರ್ಷಗಳ ನಂತರ ಈಗ ಅದಕ್ಕೆ "ಕರ್ನಾಟಕ" ಎಂಬ ಹೆಸರು ದೊರೆತಿದೆ. ಇದೇ ನವಂಬರ್ 1ನೆಯ ಗುರುವಾರ, ಶುಭ ದಿನದಂದು ನಮ್ಮ ಚಿನ್ನದ ನಾಡು "ಕರ್ನಾಟಕ" ಎಂದು ಕರೆಯಲ್ಪಡುವುದು. ಆದುದರಿಂದ ಈ ಸಲದ ರಾಜ್ಯೋತ್ಸವವನ್ನು ಸಂದರ್ಭಾನುಚಿತ ಔಚಿತ್ಯಗನುಗುಣವಾಗಿ ಒಳ್ಳೆ ವೈಭವ ವಿಜೃಂಭಣೆಗಳಿಂದ ಆಚರಿಸುವದು ಕನ್ನಡಿಗರ ಕರ್ತವ್ಯವಾಗಿದೆ.

ಈ ಸುದಿನವನ್ನು ಅನೇಕ ಕನ್ನಡಿಗರು 1956 ರಿಂದಲೂ ಎದುರು ನೋಡುತ್ತಿದ್ದುದು ಸ್ವಾಭಾವಿಕ. ಅಂಥವರಲ್ಲಿ ಪ್ರಮುಖರಾದ ಅತ್ಯುಜ್ವಲ ಕನ್ನಡಾಭಿಮಾನಿ, ಮುಂಬೈ ವಾಸಿ, ಒಳ್ಳೆ ಖ್ಯಾತ ಸಾಹಿತಿಗಳಾದ ಶ್ರೀ ಕೃಷ್ಣ ಕುಮಾರ ಕಲ್ಲೂರ, ಕನ್ನಡ ನಾಡಿನ ಏಕೀಕರಣಕ್ಕಾಗಿ ಜೀವನವನ್ನೇ ಮುಡುಪಿಟ್ಟು ದುಡಿದ ಮಂಗಳವೇಢೆ ಶ್ರೀನಿವಾಸರಾಯರೇ ಮೊದಲಾದ ಇನ್ನೂ ಅನೇಕ ಸ್ನೇಹಿತರು ಈ ನಾಮಕರಣ ದಿನವನ್ನು ಅಂದು ಒಳ್ಳೆ ಅರ್ಥಪೂರಿತವಾಗಿ ಆಚರಿಸುವ ಕಾರ್ಯಕ್ರಮಗಳನ್ನಿರಿಸಿಕೊಂಡಿದ್ದಾರೆ.

ಹರಿದು ಹಂಚಿ ಹೋಗಿದ್ದ ನಾಡು ಒಂದಾದ ಆ ದಿನ — 1956 ನೇ ನವಂಬರ್ 1 ರಂದು, ಅವರನ್ನೊಳಗೊಂಡ ನಾವೆಲ್ಲ ಸ್ನೇಹಿತರು ದಿ|| ಕುಲ್ಲ ಪುರೋಹಿತ ಅಲೂರ ವೆಂಕಟರಾಯರ ನೇತೃತ್ವದಲ್ಲಿ ಹಂಪೆಯಲ್ಲಿ ಕೆಲವೊಂದು ಕಾರ್ಯಕ್ರಮ ನೆರವೇರಿಸಿ ನಾಡಿಗೆ ಶುಭ ಕೋರಿದ್ದುಂಟು. ಅದೇ ರೀತಿ 1ನೇ ನವಂಬರಿವಂದು-ಕನ್ನಡಿಗರ ಅಭೀಷ್ಟ ಕೈಗೂಡಿದ ಚರಿತ್ರಾರ್ಹ ದಿನವೆಂದು ಇದೇ ಕರ್ನಾಟಕತ್ವದ ಘನತೆ ಗೌರವಗಳಿಗನುಚಿತವಾದ ಉತ್ಸವ ನಡೆಸುವದನ್ನು ನಿರ್ಧರಿಸಲಾಗಿದೆ.

ಹಂಪೆ, ಪಂಪಾಪತಿ ವಿರೂಪಾಕ್ಷನ ಪುಣ್ಯ ಕ್ಷೇತ್ರ; ಕನ್ನಡ ನಾಡದೇವಿ ಭುವನೇಶ್ವರಿ ಅಲ್ಲಿ ನೆಲೆಸಿದ್ದಾಳೆ. ಕನ್ನಡ ಸಾಮ್ರಾಜ್ಯ ಸ್ಥಾಪನೆಯ ಗಂಡು ಪಿಟ್ಟಿನ ಸ್ಥಳ ಅದು. ವಿದ್ಯಾರಣ್ಯರು ತಪಸ್ಸುಗೈದ ಪುಣ್ಯ ತಾಣ.

ಕರ್ನಾಟಕದ ಕೀರ್ತಿ ದಿಗ್ದಿಗಂತಗಳಿಗೂ ಹರಡಿದುದು ಆ ವಿಜಯನಗರದಿಂದ. ಹಳೆಯ ವೈಭವದ ಕುರುಹುಗಳಾಗಿ ಈಗಲೂ ಅಲ್ಲಿ ಅನೇಕ ಅವಶೇಷಗಳು ನೆಲೆ ನಿಂತು ಕನ್ನಡಿಗರನ್ನು ಎಚ್ಚರಿಸುತ್ತಿವೆ. ಕನ್ನಡತನದ ದೀಕ್ಷೆ ಕೈಕೊಳ್ಳಲು, ಕರ್ನಾಟಕತ್ವದ ನಿಜದರ್ಶನ ಮಾಡಿಕೊಳ್ಳಲು ಅದಕ್ಕಿಂತ ಶ್ರೇಷ್ಠ ತಾಣ ಮತ್ತೊಂದಿರಲಾರದು. ತುಂಗಭದ್ರೆಯ ಆಣೆಕಟ್ಟಿನಿಂದಾಗಿ ಆ ನಾಡಿನಲ್ಲಿ ಹೊಸಚೈತನ್ಯವೀಗ ಮೂಡಿ ಬಂದು, ಹೊಸ ದೃಷ್ಟಿ ನೆಲೆಸಿ, ಹೊಸ ಸೃಷ್ಟಿಗಾಗಿ ವಾತಾವರಣ ತಿಳಿಯಾಗಹತ್ತಿದೆ. ಈ ಸನ್ನಿವೇಶದಲ್ಲಿ ಸಮೀಪದ ತೋರಣಗಲ್ಲಿನಲ್ಲಿ, ಶೀಘ್ರದಲ್ಲಿ ಬರಲಿರುವ ಉಕ್ಕಿನ ಕಾರಖಾನೆ ಹೊಸ ಆಶೆ ಆಕಾಂಕ್ಷೆಗಳನ್ನು ಕನ್ನಡಿಗರಲ್ಲಿ ಕುದುರಿಸಿ ಅವರನ್ನು ಅಲ್ಲಿಗೆ ಆಕರ್ಷಿಸಹತ್ತಿದೆ.

ಕನ್ನಡ ಕುಲಪುತ್ರರೆಲ್ಲ **ಅಲ್ಲಿ** ನವೆಂಬರ್ 1 ರಂದು ಸೇರಿ, ಭುವನೇಶ್ವರಿಯ ಸನ್ನಿಧಾನದಲ್ಲಿ **ಕರ್ನಾಟಕ ಜ್ಯೋತಿ** ಹೊತ್ತಿಸಿ, ಅದು ನಂದಾದೀಪವಾಗುವಂತೆ ಏರ್ಪಡಿಸಲಾಗುವುದು. ಆ ಜ್ಯೋತಿ ಮುಟ್ಟಿದ ಹಲವಾರು ಜ್ಯೋತಿಗಳು ಅಲ್ಲಿಂದ **ಕರ್ನಾಟಕದ** ಮೂಲೆ ಮೂಲೆಗಳಿಗೆ ಒಯ್ಯಲ್ಪಡುವುವು. ಕನ್ನಡದ ಕೆಚ್ಚಾದ ಗದುಗಿನ ವೀರನಾರಾಯಣನ ಕ್ಷೇತ್ರಕ್ಕೆ ಅಂಥದೊಂದು ಜ್ಯೋತಿಯನ್ನು ಒಯ್ದು, ಅಲ್ಲಿ ನಂದಾದೀಪವಾಗಿಸಲು ಗದುಗಿನ ಸಾಹಸಿಗರು ಮುಂದೆ ಬಂದಿದ್ದಾರೆ. ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳೂ, ಕರ್ನಾಟಕ ನಾಮಕರಣದ ಕಾರಣಕರ್ತರೂ ಆದ **ಶ್ರೀ ಡಿ.** ದೇವರಾಜ ಅರಸರು ಆ ಜ್ಯೋತಿಯನ್ನು ಗದುಗಿನಲ್ಲಿ ನವೆಂಬರ್ 3 ರಂದು ಸ್ವಾಗತಿಸಲಿದ್ದಾರೆ. ಕನ್ನಡನಾಡು ನುಡಿಗಳಿಗಾಗಿ ಮಡಿದು, ಅದು ಕರ್ನಾಟಕವೆಂಬ ಯಥಾರ್ಥ ಹೆಸರು ಹೊಂದಿದ್ದನ್ನು ಕಣ್ಣಾರೆ ಕಾಣುವ ಭಾಗ್ಯಪಡೆದ ಸಹಸ್ರಾರು ಕನ್ನಡಿಗರಿಗೆ ಸಾಂಕೇತಿಕವಾಗಿ ಅಲ್ಲಿ ಸನ್ಮಾನ **ಹಾಗೂ ಗೌರವಗಳು** ನಡೆಯಲಿವೆ. ರಾಜ್ಯದ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆವ ಈ ಸಮಾರಂಭದಲ್ಲಿ ಕರ್ನಾಟಕ ಉತ್ಸವ ಸಂಚಿಕೆಯೊಂದನ್ನು ಬಿಡುಗಡೆ ಮಾಡಲಾಗುವುದು. ಜತೆಯಲ್ಲಿ ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ಇದ್ದೇ ಇರುವುವು.

ಹಂಪೆಯಲ್ಲಿ ನಡೆಯುವ ಇನ್ನುಳಿದ ಕಾರ್ಯಕ್ರಮ ಇಂತಿವೆ: **ಕರ್ನಾಟಕ** ಸ್ತಂಭ ಪ್ರತಿಷ್ಠಾಪನೆಯ ಭೂಮ್ಯಿ ಪೂಜೆ. ನೂರಾರು ಅಡಿ ಎತ್ತರದ ಈ ರಾಯಗಂಭವು ಒಮ್ಮೆಲೆ ಕಟ್ಟಲ್ಪಡದೆ, ಹಲವಾರು ವರ್ಷಗಳ ವರೆಗೆ ಹಂತಹಂತವಾಗಿ ನಡೆಯುವುದು. ಪ್ರತಿವರ್ಷ ಕೆಲವೊಂದು ಊರ ಜನತೆ, ಸಂಘಸಂಸ್ಥೆಗಳೇ ಮೊದಲಾದವರು ಅವನ್ನು ಕೆಲವೊಂದು ಅಡಿ ಎತ್ತರಕ್ಕೆ ಕಟ್ಟುವಲ್ಲಿ ಭಾಗವಹಿಸಲು ಹಾಗೂ ಇಚ್ಛಿಸಿದವರೆಲ್ಲರ ಸೇವೆಯನ್ನು ಒಳಗೊಂಡು ಬಹುಕಾಲ ಚಿರನೂತನ ಚೈತನ್ಯ ಪ್ರೇರಕವಾಗಿ ಪರಿಣಮಿ

ಸಲೆಂದು ಈ ರೀತಿ ಪ್ರೋಜೆಸಲಾಗಿದೆ. ಅದು ಪೂರ್ತಿ ಮುಗಿದಾಗ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಸಮೃದ್ಧಿ ಸೂಚಕ ವಿಜಯ ಸ್ತಂಭವಾಗಲೆಂದು ಹಾರೈಸಲಾಗಿದೆ. ಕನ್ನಡ ನಾಡಿನ ಜನತೆಯ ಅಭಿವೃದ್ಧಿಯೊಂದಿಗೇ ಅದು ಬೆಳೆದುಬರುವುದೆಂದು ಆಶಿಸಲಾಗಿದೆ. ಸರ್ವರೂ ಇದನ್ನು ಸ್ವಾಗತಿಸುವರೆಂದು ಬಗೆಯಲಾಗಿದೆ.

ಅಲ್ಲದೆ ಅಂದು ಹಂಪೆಯಲ್ಲಿ ಸಾಂಕೇತಿಕ ವನನಿರ್ಮಾಣದ ಕಾರ್ಯವೂ ಪ್ರಾರಂಭವಾಗುವುದು. ನಾಡಿನ ಸಾಂಸ್ಕೃತಿಕ ಸಂಕೇತಗಳಾದ ಆಲ, ಅಶ್ವತ್ಥ, ಅತ್ತಿ, ಬನ್ನಿ, ಬಿಲ್ವ, ಬೇವು, ಮಾವು ಹಲಸುಗಳೆ ಮೊದಲಾದ ವೃಕ್ಷಗಳನ್ನು ನೆಡಲಾಗುವುದು. ವಿಶಾಲವಾದ ಕ್ಷೇತ್ರದಲ್ಲಿ ಸದಾ ಹಸುರು ಮೆರೆಯುತ್ತಿರುವ ಜೀವನದ ಸಂಕೇತವಾದ ಈ ಪಂಚವಟಿಯು ಕನ್ನಡತ್ವದ ಸತ್ವದ್ಯೋತಕವಾಗಿ ಕಂಗೊಳಿಸುವದೆಂದು ನಂಬಲಾಗಿದೆ. ಕನ್ನಡ ನಾಡಿನ ಎಲ್ಲ ಭಾಗಗಳ ಮಣ್ಣನ್ನು ತಂದು ಪಂಪಾಕ್ಷೇತ್ರದ ಪವಿತ್ರಮಣ್ಣಲ್ಲಿ ಬೆರೆಸಿ, ಪ್ರಥಮವಾಗಿ ವಟವೃಕ್ಷ ನೆಡಲಾಗುವುದು. ರಾಜ್ಯದ ಎಲ್ಲ ಪುಣ್ಯ ನದಿಗಳ, ಸರೋವರ, ಸಾಗರಗಳ ನೀರನ್ನು ತಂದು ಪಂಪಾವತಿಯ ಕಾಲ್ದೊಳೆಯ ಪವಿತ್ರ ತುಂಗಭದ್ರೆಯ ಜಲದಲ್ಲಿ ಬೆರೆಸಿ, ಆ ನೀರಿನಿಂದ ಆ ವೃಕ್ಷಗಳಿಗೆ ಪ್ರಪ್ರಥಮ ನೀರುಣಿಸಲಾಗುವುದು.

ಶ್ರೀಭುವನೇಶ್ವರೀ ಪಂಪಾಪತಿ, ವಿದ್ಯಾರಣ್ಯಾದಿ ದೇವರುಗಳಿಗೆ ಹಾಗೂ ಮೂರ್ತಿಗಳಿಗೆ ಅಭಿಷೇಕ ಪುನಸ್ಕಾರಗಳನ್ನು ಮಾಡಿ, ಆರತಿಗೈದು, ಹಾಡಿ, ಕುಣಿದಾಡಿ, ಸಂಕೀರ್ತನೆ, ಮೆರವಣಿಗೆ ಮಾಡಿ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲಾಗುವದು. ಮುಂಬೈ ಕನ್ನಡಿಗರ ಸಾಂಸ್ಕೃತಿಕ ಕಾರ್ಯಕಲಾಪಗಳು ಅಂದಿನ ವಿಶೇಷಗಳಾಗಿವೆ. ನಾಡು ನುಡಿಗಳಿಗಾಗಿ ದುಡಿದು ಕಣ್ಮರೆಯಾಗಿರುವವರಿಗೆಲ್ಲ ಹೃತ್ಪೂರ್ವಕ ಶ್ರದ್ಧಾಂಜಲಿ ಏರ್ಪಡಿಸಲಾಗುವುದು.

ಈ ಕಾರ್ಯಕ್ರಮಗಳಿಗೆ ಸ್ವಯಂ ಸ್ಫೂರ್ತಿಯಿಂದ ಜನ ತಂಡ ತಂಡವಾಗಿ ದೂರದೂರಿನಿಂದ ಬರಲಿದ್ದಾರೆ. ಕಾಲ್ನಡಿಗೆಯಲ್ಲಿ, ಎತ್ತಿನ ಗಾಡಿಯಲ್ಲಿ, ಸೈಕಲ್ ಮೇಲೆ, ಕಾರು, ಬಸ್ಸು, ಟ್ರೇನುಗಳಲ್ಲಿ ಬರಲಿದ್ದಾರೆ. ಆಂಥವರೆಲ್ಲ ತಮ್ಮ ವ್ಯವಸ್ಥೆಯನ್ನು ತಾವೇ ಮಾಡಿಕೊಂಡು ತಮ್ಮ ಭಾಗಗಳ ವೇಷ ಭೂಷಣಗಳ ವೈಶಿಷ್ಟ್ಯದ ಪ್ರದರ್ಶನ ಮಾಡಲಿದ್ದಾರೆ. ಸಮವಸ್ತ್ರದ ಸ್ವಯಂ ಸೇವಕರು ಅನೇಕ ವಿದ್ಯಾಸಂಸ್ಥೆಗಳಿಂದ ಬರಲಿದ್ದಾರೆ. ಕೊಂಬು, ಕಹಳೆ, ಕರಡಿಮಜಲು, ಓಲಗ, ಡೊಳ್ಳು, ಭಜನೆ ಮೇಳಗಳು, ಮೂಲೆ ಮೂಲೆಗಳಿಂದ ಬರಬೇಕು. ಇವರೆಲ್ಲರ ನೆರವಿನಿಂದ ಕರ್ನಾಟಕ ಜ್ಯೋತಿಯ ಮೆರವಣಿಗೆ ಅಭೂತಪೂರ್ವವಾಗಿ ನಡೆಯಲಿದೆ. ಹೊರಗಿನಿಂದ ಬರಶಕ್ಕವರು ತಮ್ಮ ಭಾಗದ ಮಣ್ಣು ಜಲಗಳನ್ನು ಮರೆಯದೆ ತರಲು ನಮ್ಮ ವಿಶೇಷ ವಿನಂತಿ.

ಕನ್ನಡ ನಾಡು ನುಡಿಗಾಗಿ ದುಡಿದವರು ಅಸಂಖ್ಯಾತರಾಗಿದ್ದಾರೆ. ಅಂಥವರ ಯಾದಿ ಸಿದ್ಧಪಡಿಸುವುದು ಎಲ್ಲಕ್ಕಿಂತ ಹೆಚ್ಚಿನ ಕಷ್ಟದ್ದಾಗಿದೆ. ಎಷ್ಟೇ ಜಾಗರೂಕತೆವಹಿಸಿದರೂ ಹಲಕೆಲವರ ಹೆಸರು ಬಿಟ್ಟು ಹೋಗುವ ಸಂಭವವಿಲ್ಲದಿಲ್ಲ. ತಮಗೆ ಗೊತ್ತಿದ್ದವರ ಹೆಸರುಗಳನ್ನು ಬರೆದು ಕಳಿಸುವದು ಆ ಆ ಭಾಗದ ಪ್ರತಿಯೊಬ್ಬರೂ ತಮ್ಮ ಕರ್ತವ್ಯವೆಂದು ಭಾವಿಸಿ ಹಾಗೆ ಮಾಡಿದರೆ ನಮ್ಮ ಕೆಲಸ ಹಗುರವಾಗುವದು. ಇದರಿಂದ ಅಪೂರ್ಣತೆಯ ಕೊರತೆ ತುಂಬಿಕೊಳ್ಳಲು ಸಾಧ್ಯವಾಗುವದು. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಚ್ಛಿಸುವವರು ಮೊದಲೇ ತಿಳಿಸಿದಲ್ಲಿ ವ್ಯವಸ್ಥೆ ಮಾಡಲು ಅನುಕೂಲವಾಗುವದು. ಇವು ಕನ್ನಡಿಗರೆಲ್ಲರ ಸ್ವಯಂ ಸ್ಫೂರ್ತಿಯ ಕಾರ್ಯಕ್ರಮಗಳಾದ್ದರಿಂದ ಔತಣದ ನಿರೀಕ್ಷೆ ಇಲ್ಲಿ ಇಲ್ಲ. ಪ್ರೀತಿಪೂರ್ವಕ ಕರೆ ಸರ್ವರಿಗೂ ಇದೆ. ಸರ್ವರೂ ಸಹಕರಿಸುವರೆಂದು ಹಾರೈಸಲಾಗಿದೆ.

ಈ ಉತ್ಸವದಲ್ಲಿ ಪಾಲುಗೊಳ್ಳಲು ಅನೇಕ ಒಳ ಹೊರನಾಡ ಕನ್ನಡಿಗರು ಈಗಾಗಲೇ ಆಸ್ಥೆ ತೋರಿಸಿದ್ದಾರೆ; ಆತುರರಾಗಿದ್ದಾರೆ. ಮುಂಬೈನಿಂದ ಸೈಕಲ್ ಬಸ್ಸುಗಳು ಬರಲಿವೆ. ಈ ಕಾರ್ಯಕ್ರಮಕ್ಕೆ ಕೇಂದ್ರದ ಹಲವು ಸಚಿವರೂ ಬರಲಿದ್ದಾರೆ. ರಾಜ್ಯದ ಮಾನ್ಯ ಮಂತ್ರಿಗಳಲ್ಲಿ ಕೆಲವರು ಈಗಾಗಲೇ ಬರುವುದಾಗಿ ತಿಳಿಸಿದ್ದಾರೆ. ಸನ್ಮಾನ್ಯ ಸಚಿವರುಗಳಾದ ಶ್ರೀ. ಕೆ. ಎಚ್. ಪಾಟೀಲ, ಶ್ರೀ. ಎಂ. ವೈ. ಘೋರ್ಪಡೆ, ಶ್ರೀ ಡಿ. ಕೆ. ನಾಯ್ಕರ, ಶ್ರೀ ನಂಜೇಗೌಡ, ಶ್ರೀ ನಾಗರಾಳ್, ಶ್ರೀ ದೇವೇಂದ್ರಪ್ಪ ಫಾಳಪ್ಪ ಅವರುಗಳೇ ಮುಂತಾದವರು ಬರಲಿದ್ದಾರೆ. ಹಲವಾರು ಶಾಸಕರು, ಪಾರ್ಲಿಮೆಂಟ್ ಸದಸ್ಯರು, ಸಾಹಿತಿಗಳೂ, ಕಲಾವಿದರೂ, ಸಾರ್ವಜನಿಕ ಸೇವಾಧುರಂಧರರೂ ಬರಲೊಪ್ಪಿದ್ದಾರೆ.

ಉಜ್ವಲ ಕನ್ನಡಾಭಿಮಾನಿಗಳೆಲ್ಲರೂ ತಮಗೆ ಉಚಿತವಾದ ರೀತಿ ಹಾಗೂ ಮಟ್ಟಗಳಲ್ಲಿ ಈ ಕಾರ್ಯಕ್ರಮಗಳಲ್ಲಿ ಪಾಲುಗೊಳ್ಳಲು ಆದರದ ಕರೆ ಈ ಮೂಲಕ ನೀಡಲಾಗುತ್ತದೆ. ನಾಡನುಡಿಗಳ ಅತುಲ ಪ್ರೇಮಾಭಿಮಾನಿಗಳಿಂದ ನಡೆಯಲಿರುವ ಈ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಭಾಗಿಗಳಾಗುತ್ತಿರುವುದನ್ನು ಎದುರು ನೋಡುತ್ತಿರುವ,

ನಿಮ್ಮ ಒಲವಿನ,
ಕೆ. ಎಫ್. ಪಾಟೀಲ,
ಕ. ನಾ. ಉ. ಸಮಿತಿ
ಕಾರ್ಯಾಧ್ಯಕ್ಷರು

20-10-1973
10, ಸುದರ್ಶನ ಅತಿಥಿಗೃಹ,
ಬೆಂಗಳೂರು-560001

ಕಾರ್ಯಕ್ರಮ :

ಹಂಪೆಯಲ್ಲಿ :

ದಿನಾಂಕ 31-10-73 ನೇ ಬುಧವಾರ

ಮಧ್ಯರಾತ್ರಿ

ಶ್ರೀ ಪಂಪಾವತಿ ವಿರೂಪಾಕ್ಷ, ಶ್ರೀ ಭುವನೇಶ್ವರಿ, ಶ್ರೀ ವಿದ್ಯಾ
ದೇವಾಲಯಗಳಲ್ಲಿ ಅಭಿಷೇಕ, ಆರತಿ, ಕರ್ನಾಟಕ ಜ್ಯೋತಿ ಹೊತ್ತಿ
ಮತ್ತು ಅದನ್ನು ನಂದಾದೀಪವಾಗಿರುಸುವಿಕೆ.

ದಿನಾಂಕ 1-11-73 ನೇ ಗುರುವಾರ

ಬೆಳಿಗ್ಗೆ

ನಗರ ಸಂಕೀರ್ತನೆ
ಕರ್ನಾಟಕ ಜ್ಯೋತಿಯ ಮೆರವಣಿಗೆ
ಸಾಂಸ್ಕೃತಿಕ ಚಟುವಟಿಕೆಗಳು.

ಮಧ್ಯಾಹ್ನ

ಸ್ಮಾರಕಸ್ತಂಭದ ಭೂಮಿಪೂಜೆ, ವಟ ಬನದಲ್ಲಿ ವೃಕ್ಷಾರೋಪಣ
ನಾಡನಡಿಗಳ ಭವ್ಯ ಕನಸು ಕಂಡು ಕ್ರಣ್ಮರಿಯಾದವರಿಗೆ ಶ್ರದ್ಧಾಂ

ಗದುಗಿನಲ್ಲಿ :

ದಿನಾಂಕ 3-11-73 ನೇ ಶನಿವಾರ

ಬೆಳಿಗ್ಗೆ

ಶ್ರೀ ವೀರನಾರಾಯಣನ ಗುಡಿಯಲ್ಲಿ
ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಕರ್ನಾಟಕ ಜ್ಯೋತಿಗೆ ಸ್ವಾಗತ
ಕರ್ನಾಟಕ ಜ್ಯೋತಿಯ ಮೆರವಣಿಗೆ

ಮಧ್ಯಾಹ್ನ

ಕರ್ನಾಟಕ ಉತ್ಸವ ಸಂಚಿಕೆಯ ಬಿಡುಗಡೆ
ಕರ್ನಾಟಕವು ಅಸ್ತಿತ್ವದಲ್ಲಿ ಬರಲು ಅಪೂರ್ವ ಸೇವೆ ಸಲ್ಲಿಸಿದವರಿಗೆ ಹಾ
ಹೆಸರಿಸುವಲ್ಲಿ ದಿಟ್ಟ ನಿಲುಮೆ ತಳೆದ ಸನ್ಮಾನ್ಯ ರಾಜ್ಯದ ಮುಖ್ಯ ಮಂ
ಶ್ರೀ ಡಿ. ದೇವರಾಜ ಅರಸರಿಗೆ ಸನ್ಮಾನ.

Printed at Davalath Printers, Bangalore-3. Phone 26450